<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**C.C. - 1980-24** **ಪಿಡಬ್ಲ್ಯೂ‌ಃ** **<u>8</u>**

**ಸಿಡಬ್ಲ್ಯೂ‌ಃ** **<u>14</u>**

ಸಾಕ್ಷಿದಾರರ ಹೆಸರು ‌ಃ ಮೀನಾಕ್ಷಿ ಮಡಿವಾಳರ

ತಂದೆ ಹೆಸರು ‌ಃ ನೀಲಪ್ಪ

ವಯಸ್ಸು ‌ಃ 52 ವರ್ಷ

ಉದ್ಯೋಗ ‌ಃ ಎ ಎಸ್ ಐ

ವಾಸಸ್ಥಳ ‌ಃ ಘಂಟಿಕೇರಿ ಪೋಲಿಸ ಠಾಣೆ, ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 29.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2019 ರಿಂದ 2025 ವರೆಗೆ ಮಹಿಳಾ ಎ ಎಸ್ ಐ ಆಗಿ ಅಶೋಕ ನಗರ ಠಾಣೆಯಲ್ಲಿ ಸೇವೆ ಸಲ್ಲಿದ್ದೇನೆ.

ದಿಃ 7.1.2024 ರಂದು ರಾತ್ರಿ 8 ರಿಂದ ಬೆಃ 8 ಗಂಟೆವರೆಗೆ ನನ್ನದು ಪೆಟ್ರೋಲಿಂಗ ಸೇವೆ ಇತ್ತು. ಆ ದಿನ ನಮ್ಮ ವಾಹನ ಚಾಲಕ ಚಾಸಾ-15 ರವರು ಇದ್ದರು. ದಿಃ 8.1.2024 ರಂದು ಬೆಃ 7 ಗಂಟೆಗೆ ನಾವು ಕರ್ತವ್ಯ ನಿರ್ವಹಿಸುತ್ತಿದ್ದಾಗ ಹುಬ್ಬಳ್ಳಿ -ಧಾರವಾಡ ಸಿಟಿ ಕಂಟ್ರೋಲ್ ರೂಮ್ ದಿಂದ ನಮ್ಮ ಟ್ಯಾಬಗೆ ಅಪಘಾತ ದಲ್ಲಿ ಒಬ್ಬ ವ್ಯಕ್ತಿ ಗಾಯಹೊಂದಿ ಬಿದ್ದಿದ್ದಾನೆ ಎಂದು ಮಾಹಿತಿ ಬಂದಿದ್ದು, ಸ್ಥಳ ಹುಬ್ಬಳ್ಳಿ-ಉಣಕಲ್ ಸಾಯಿನಗರ -ಸುಳ್ಳ ರೋಡ ಹತ್ತಿರವೆಂದು ಹೇಳಿದ್ದು, ನಾವು ಕೂಡಲೇ ಉಣಕಲ್ - ಸಾಯಿನಗರ -ಸುಳ್ಳ ರೋಡ ಲೇಔಟ್ ಬಳಿ ಬಂದು ನೋಡಿದಾಗ ಒಬ್ಬ ವ್ಯಕ್ತಿ ತಲೆಗೆ ಗಾಯಹೊಂದಿ ಬಿದ್ದಿದ್ದನು. ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಸಾರ್ವಜನಿಕರನ್ನು ವಿಚಾರಿಸಿದಾಗ ಒಂದು ಕೆಂಪು ಬಣ್ಣದ ಹುಂಡೈ ಕಾರ್ ಕೆಎ-05 ಎಂ ಟಿ /6641 ನೇದ್ದರ ಕಾರ್ ಚಾಲಕ ವೇಗವಾಗಿ ಬಂದು ಡಿಕ್ಕಿಪಡಿಸಿ ವಾಹನ ಸಮೇತ ಪರಾರಿಯಾಗಿ ಹೋಗಿದ್ದನು ಎಂದು ಹೇಳಿದರು. ಸಾರ್ವಜನಿಕರ ಪೈಕಿ ಒಬ್ಬ ವ್ಯಕ್ತಿ ಗಾಯಗೊಂಡವರನ್ನು ಮಾಣಿಕ ತಂದೆಃ ನಾರಾಯಣರಾವ ಹಂಚಾಟೆ ಎಂದು ಗುರುತಿಸಿದ್ದು, ಗುರುತಿಸಿದ ವ್ಯಕ್ತಿ ಆತನ ಮಗ ರಾಹುಲ್ ಎಂದು ಇದ್ದು, ನಂತರ 108 ಅಂಬುಲೆನ್ಸ ಮೂಲಕ ಗಾಯಾಳುವನ್ನು ಕಿಮ್ಸ ಆಸ್ಪತ್ರೆಗೆ ಚಿಕಿತ್ಸೆಗೆ ಕಳಿಸಿಕೊಟ್ಟಿದ್ದೇವೆ. ನಂತರ ನಾವು ಸೇವೆಗೆ ಹೋಗಿದ್ದೇವೆ.

ರಾಹುಲ್ ಪೋಲಿಸ ಠಾಣೆ ಯಲ್ಲಿ ಗಾಯಾಳು ರೋಡಿನ ಮಧ್ಯೆದಲ್ಲಿ ಮರಣ ಹೊಂದಿದ್ದಾನೆಂದು ಠಾಣೆಗೆ ದೂರು ನೀಡಿದ್ದು, ಆ ಮೂಲಕ ಗಾಯಾಳು ಮರಣ ಹೊಂದಿದ್ದಾನೆಂದು ನಮಗೆ ತಿಳಿಯಿತು. ನಾನು ಈ ಕುರಿತು ತನಿಖಾಧಿಕಾರಿ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಕೆ ಪಿ, ವಕೀಲರಿಂದಃ**

ನನಗೆ ಯಾವುದೇ ಕಂಟ್ರೋಲ್ ರೂಮ್ ದಿಂದ ಮಾಹಿತಿ ಬಂದಿಲ್ಲ ಅಂದರೆ ಸರಿಯಲ್ಲ. ಸ್ಥಳಕ್ಕೆ ಹೋಗಿಲ್ಲ ಅಂದರೆ ಸರಿಯಲ್ಲ. ನನಗೆ ಘಟನಾ ಸ್ಥಳದಲ್ಲಿ ಗಾಯಾಳು ಗಾಯಹೊಂದಿದ ಬಗ್ಗೆ ಕಂಡುಬಂದಿಲ್ಲ ಅಂದರೆ ಸರಿಯಲ್ಲ. ಕೆಎ-05 - ಎಂಟಿ /6641 ಕಾರಿನಿಂದ ಅಪಘಾತ ವಾಗಿದೆ ಎಂದು ತಿಳಿದುಬಂದಿಲ್ಲ ಅಂದರೆ ಸರಿಯಲ್ಲ. ನಾನು ಕರ್ತವ್ಯದಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ಗಾಯಾಳುವನ್ನು ಆಸ್ಪತ್ರೆಗೆ ಕಳಿಸಿಕೊಟ್ಟಿಲ್ಲ ಅಂದರೆ ಸರಿಯಲ್ಲ. ಮೇಲಧಿಕಾರಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.